ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪಾಂಡಪುವರ

**<u>ಸಿಸಿ ನಂಃ1179/2023</u>**

ಕರ್ನಾಟಕ ರಾಜ್ಯದ ಪರವಾಗಿ
ಪೋಲಿಸು ಉಪ ನಿರೀಕ್ಷಕರು
ಮೇಲುಕೋಟೆ ಪೋಲೀಸು ಠಾಣೆ - ಫಿರ್ಯಾಧಿದಾರರು

-ವಿರುದ್ಧ-

ಕುಮಾರ ಮತ್ತು ಇನ್ನೊಬ್ಬರು - ಆರೋಪಿಗಳು

## <u>ದೋಷಾರೋಪಣೆ</u>

ಶ್ರೀ ಕಿಶೋರ್ ಕುಮಾರ್ ಕೆ ಎನ್ ಬಿ.ಎ.ಎಲ್, ಎಲ್.ಎಲ್.ಬಿ. ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ನ್ಯಾಯಾಲಯ ಪಾಂಡವಪುರ ಆದ ನಾನು,

ಎ **1.** ಕುಮಾರ ಬಿನ್ ಲೇಟ್ ರಾಜೇಗೌಡ, **38** ವರ್ಷ,
ಎ **2.** ಚನ್ನೆಗೌಡ ಬಿನ್ ಲೇಟ್ ಸ್ವಾಮಿಗೌಡ, **40** ವರ್ಷ,

ವಾಸಃ ಲಕ್ಷ್ಮೀಸಾಗರ ಗ್ರಾಮ,
ಮೇಲುಕೋಟೆ ಹೋಬಳಿ,
ಪಾಂಡವಪುರ ತಾಲ್ಲೂಕು,
ಮಂಡ್ಯ ಜಿಲ್ಲೆ.

**ನಿಮ್ಮ ಮೇಲೆ ಹೊರಿಸುವ ಆರೋಪಣೆ ಏನೆಂದರೆಃ-**

ಮೊದಲನೆಯದಾಗಿ ಃ ದಿನಾಂಕ 29.09.2023 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಮೇಲುಕೋಟೆ ಪೋಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಲಕ್ಷ್ಮೀಸಾಗರ ಗ್ರಾಮದಲ್ಲಿ ಹಾದುಹೋಗಿರುವ ನೀಲನಹಳ್ಳಿ ರಸ್ತೆಯಲ್ಲಿ ಚಾಸಾ.1 ಮತ್ತು 2 ರವರುಗಳು ಇದ್ದಾಗ ಅದೇ ರಸ್ತೆಯಲ್ಲಿ 1 ಮತ್ತು 2 ನೇ ಆರೋಪಿಗಳಾದ ನೀವು ನಡೆದುಕೊಂಡು ಹೋಗುತ್ತಿದ್ದಾಗ ಚಾಸಾ.2 ರವರು ನಿಮ್ಮನ್ನು ಕಂಡು ಈ ಹಿಂದೆ ತಮ್ಮ ಜಮೀನಿನಲ್ಲಿ ನೆಟ್ಟಿದ್ದ ಟಮೋಟ ದಡಿಗಳನ್ನು ಕಿತ್ತುಹಾಕಿದುದ್ದನ್ನು ಕೇಳಿದಾಗ ಆಗ ಹಳೇ ದ್ವೇಷದಿಂದ ಆರೋಪಿ 1 ಮತ್ತು 2 ರವರುಗಳಾದ ನೀವು ಏಕಾಏಕಿ ಚಾಸಾ.2 ರವರಿಗೆ ಬೋಳಿಮಗನೆ, ಸೂಳೆ ಮಗನೇ ಆ ಜಮೀನು ನಮಗೂ ಸೇರಬೇಕು ಎಂದು ಅವಾಚ್ಯ ಶಬ್ದಗಳಿಂದ ಬೈದ ಕಾರಣ ಆ ಮೂಲಕ ಭಾ.ದಂ.ಸಂ. ಕಲಂ.504 ಸಹವಾಚಕ 34 **ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.**

ಎರಡನೆಯದಾಗಿ - ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ನಿಮ್ಮ ಏಕೋದ್ದೇಶದಿಂದ ಮೇಲಿನಂತೆ ಕೃತ್ಯವೆಸಗಿ, ಚಾಸಾ.2 ರವರನ್ನು ತಬ್ಬಿಹಿಡಿದುಕೊಂಡು ಕೆಳಕ್ಕೆ ಕೆಡವಿಕೊಂಡು 1 ನೇ ಆರೋಪಿಯವರು ಕೈಯಿಂದ ಚಾಸಾ.2 ರವರ ಎಡಭುಜಕ್ಕೆ ಮತ್ತು ಬಲ ಕೈ ಮಣಿಕಟ್ಟಿಗೆ ಹೊಡೆದು ನೋವುಂಟುಮಾಡಿದ ಕಾರಣ ಆ ಮೂಲಕ ಭಾ.ದಂ.ಸಂ. ಕಲಂ 323 ಸಹವಾಚಕ 34 **ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.**

ಮೂರನೇಯದಾಗಿ- ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ನಿಮ್ಮ ಏಕೋದ್ದೇಶದಿಂದ ಮೇಲಿನಂತೆ ಕೃತ್ಯವೆಸಗಿ, ಚಾಸಾ.2 ರವರಿಗೆ 2 ನೇ ಆರೋಪಿಯಾದ ನೀವು ಅಲ್ಲೆ ಬಿದ್ದಿದ್ದ ಟಮೋಟದಡಿ ದೊಣ್ಣೆಯಿಂದ ಚಾಸಾ.2 ರವರ ತಲೆಗೆ ಹೊಡೆದು ರಕ್ತಗಾಯಮಾಡಿ, ಆಗ ಚಾಸಾ.1 ರವರು ಚಾಸಾ.2 ರವರನ್ನು ಬಿಡಿಸಿಕೊಳ್ಳಲು ಬಂದಾಗ ನೀವು ಚಾಸಾ.1 ರವರ ಬಲ ಕೈಯನ್ನು ನುಲುಚಿ ನೋವುಂಟು ಮಾಡಿರುವ ಕಾರಣ ಆ ಮೂಲಕ ಭಾ.ದಂ.ಸಂ. ಕಲಂ 324 ಸಹವಾಚಕ 34 **ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.**

ಕೊನೆಯದಾಗಿ - ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ನಿಮ್ಮ ಏಕೋದ್ದೇಶದಿಂದ ಮೇಲಿನಂತೆ ಕೃತ್ಯವೆಸಗಿ, ಆರೋಪಿಗಳಾದ ನೀವು ಚಾಸಾ.1 ಮತ್ತು 2 ರವರಿಗೆ ಈ ದಿವಸ ಇವರಿಬ್ಬರೂ ಬರಲಾಗಿ ನಿವಿಬ್ಬರೂ ಬದುಕ್ಕಿದ್ದೀರಾ ಇಲ್ಲದಿದ್ದರೆ ನಿಮ್ಮನ್ನು ಕೊಲೆ ಮಾಡದೇ ಬಿಡುತ್ತಿರಲಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ ಎಂದು ಆ ಮೂಲಕ ಭಾ.ದಂ.ಸಂ. ಕಲಂ 506 ಸಹವಾಚಕ 34 **ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.**

**ಮೇಲೆ ಹೇಳಿದ ದೋಷಾರೋಪಣೆಗೆ ವಿಚಾರಣೆಗೊಳಪಡಬೇಕಾಗಿ ಈ ಮೂಲಕ ನಿರ್ದೇಶಿಸುತ್ತೇನೆ**

**ಪ್ರ.ನಂ.1ಃ ನೀವು ಈ ಮೇಲಿನ ಆಪಾದನೆಯನ್ನು ಓದಿ ಹೇಳಿದ್ದು ಅರ್ಥಮಾಡಿಕೊಂಡಿರುವಿರಾ?**

**ಉತ್ತರಃ**

**1ನೇ ಆರೋಪಿತ**

**2ನೇ ಆರೋಪಿತ**

**ಪ್ರ.ನಂ.2ಃ ನೀವು ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಾದಿಸುವಿರಾ?**
**ಉತ್ತರಃ**

**1ನೇ ಆರೋಪಿತ**

**2ನೇ ಆರೋಪಿತ**

**ಆರೋಪಿಯನ್ನು ತೆರೆದ ನ್ಯಾಯಾಲಯದಲ್ಲಿ ವಿಚಾರಿಸಿದ ಬಳಿಕ ಆತನ ಹೇಳಿಕೆಯನ್ನು ಪಡೆದಿದ್ದು ಅದು ಅವರ ಸತ್ಯ ಹಾಗೂ ಸಂಪೂರ್ಣವಾದ ಹೇಳಿಕೆಯಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.**

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ
ಪಾಂಡವಪುರ

ದಿನಾಂಕಃ 04.07.2024
ಸ್ಥಳಃ ಪಾಂಡವಪುರ